# ಭಯದಾಚೆಗಿನ ಭಯ!

**ಹೋದವಾರದ ನನ್ನ ಹರಟೆ 'ಭಯ' (http://shivakumara.50webs.com/writeups.htm) ದ ಮುಂದುವರೆದ ಭಾಗ ಇದು! 'ಭಯ'ವನ್ನು ಮುಗಿಸುತ್ತಿದ್ದಾಗ ಈ ಮುಂದುವರಿಕೆಯ ಸಾಧ್ಯತೆ ಹೊಳೆಯಿತು! ಹಾಗಾಗಿ ನಿಮ್ಮೆಲ್ಲರಿಗೂ ಮತ್ತದೇ ತಿನಿಸಿನ ಬಲವಂತ ಭೋಜನ!**

------------

ನೂರಾರು ವರ್ಷದ ಸುಕ್ಕುಗಳು ಹೆಣೆದುಕೊಂಡ ಮುಖ, ಬಿಳೀ ಪೊದೆ ಹುಬ್ಬು, ಅವುಗಳ ಕೆಳಗೆ, ಕಣ್ಣುಗುಡ್ಡೆಗಳಿಲ್ಲದ ಖಾಲೀ ಗುಳಿಗಳು–ಅವುಗಳೊಳಗಿನ ಕತ್ತಲು, ಬಿಳೀ ಮೀಸೆ-ಗಡ್ಡ, ಹಲ್ಲುಗಳು ಕಾಣದ ತೆರೆದ ಬೊಚ್ಚು ಬಾಯಿ. ದೇಹವಿಲ್ಲದ ಬರೀ ಮುಖ ಗಹಗಹಿಸಿ ನಗುತ್ತಿದ್ದಂತೆಯೇ ಬೆಚ್ಚಿ, ತಳ್ಳಿದಂತಾಗಿ ತಡವರಿಸಿ ಹಿಂದಕ್ಕೆ ಬಿದ್ದ ಅರುಣ! ತನ್ನ ಸುತ್ತಲೂ ನೋಡಿದ. ಅವನ ಎಲ್ಲ ಸ್ನೇಹಿತರೂ ಅಲ್ಲೇ ಬಿದ್ದಿದ್ದರು, ಮತ್ತು ಎಲ್ಲರೂ ಭಯಂಕರವಾಗಿ ಸತ್ತು ಹೋಗಿದ್ದರು!

ಥಟ್ಟನೆ ಕಣ್ಣುಬಿಟ್ಟ ಅರುಣ! ಅವನೆದೆ ಹೋರೊಡೆಯುತ್ತಿತ್ತು, ಗಂಟಲಲ್ಲಿ ಏನೋ ಸಿಕ್ಕಿಕೊಂಡಂತಿತ್ತು! ಕಣ್ಣು ಬಿಟ್ಟರೂ ಸುತ್ತಲಿನ ಪರಿಸರ ಅವನ ದೃಷ್ಟಿಗೆ ನಿಲುಕಲು ಸ್ವಲ್ಪ ಸಮಯವೇ ಹಿಡಿಯಿತು! ಅವನು ಅಂಗಾತ ಮಲಗಿದ್ದ, ಅವನ ತಲೆಯ ಮೇಲೆ ಬಿಳೀ ಬಣ್ಣದ ತಾರಸಿ, ಮೆತ್ತಗೆ ತಿರುಗುತ್ತಿರುವ ಫ್ಯಾನು. ಎಲ್ಲಿದ್ದೇನೆಂದು ಗೊತ್ತಾಗದೇ ಬೆವೆತಿದ್ದ ಮುಖವನ್ನು ಎಡಗೈಯಲ್ಲಿ ತೀಡಿಕೊಳ್ಳುತ್ತ ಮೆಲ್ಲಗೆ ಕತ್ತು ತಿರುಗಿಸಿ ಅತ್ತಿತ್ತ ನೋಡಿದ. ಅವನ ಪಕ್ಕದಲ್ಲೇ ಸತೀಶ ಬಿದ್ದಿದ್ದ, ಅವನಾಚೆಗೆ ರಕ್ಷಿತ್, ಹ್ಯಾರಿ, ಈಚೆ ಕಡೆಗೆ ಮಧು, ಬಾಬು, ರವಿ ಮತ್ತು ಹರೀಶ! ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದರು. ತನ್ನ ಅಂತಃಚಕ್ಷುವಿಗೆ ಕಂಡ ಭೀಭತ್ಸಕರ ದೃಶ್ಯ ನಿಜವಾಗಿಯೂ ನಡೆದಿದೆಯೆಂದುಕೊಂಡು ಥಟ್ಟನೆ ಎದ್ದು ಕುಳಿತವನಿಗೆ ಮೆಲ್ಲಮೆಲ್ಲನೆ ತಾನು ಬೇಲೂರಿನ ತನ್ನ ಹೊಸ ಮನೆಯಲ್ಲಿದ್ದುದು ಗೊತ್ತಾಯಿತು! ಹೊಸ ಮನೆಯ ಹಿಂದಿನ ಒಂದು ರೂಮಿನಲ್ಲಿ ತಾವೆಲ್ಲರೂ ಇರುವುದು ತಿಳಿದು ನೆಮ್ಮದಿಯಾಯಿತು. ಅವರ ಬ್ಯಾಗುಗಳೆಲ್ಲ ಒಂದು ಮೂಲೆಯಲ್ಲಿ ಪೇರಿಸಲ್ಪಟ್ಟವಂತೆ ಬಿದ್ದಿದ್ದವು. ಯಾಕೋ ಹಣೆಯಾಳದಿಂದ ಹುಟ್ಟಿದ ಚುಚ್ಚುವ ನೋವೊಂದು ತಲೆಯನ್ನೆಲ್ಲ ಹಿಂಡಿದಂತಾಗಿ ಹಣೆ ನೀವಿಕೊಂಡ ಅರುಣ ಸತೀಶನೆಡೆಗೆ ನೋಡಿದ, ಸತೀಶ ಉಸಿರಾಡುತ್ತಿದ್ದ! ಅವನಂತೆಯೇ ಎಲ್ಲರೂ ಜೀವಂತವಾಗಿದ್ದರು ಮತ್ತು ಗಡದ್ದಾಗಿ ನಿದ್ದೆ ಹೊಡೆಯುತ್ತಿದ್ದರು!

ತಾನು ಇಲ್ಲಿಗೆ ಹೇಗೆ ಬಂದೆ? ಅರುಣನಿಗೆ ಅರ್ಥವಾಗಲಿಲ್ಲ. ಎಲ್ಲವನ್ನೂ ನೆನಪಿಸಿಕೊಳ್ಳಲಾರಂಭಿಸಿದ. 'ನಿನ್ನೆ ರಾತ್ರಿ ಸ್ನೇಹಿತರೊಂದಿಗೆ ಬೇಲೂರು ಬಸ್ ನಿಲ್ದಾಣಕ್ಕೆ ಬಂದಿಳಿದಿದ್ದು, ನಿಲ್ದಾಣದಲ್ಲಿ ಕುಳಿತು ಎಲ್ಲರೂ ಹರಟೆ ಹೊಡೆದದ್ದು, ತಾನು ಹೇಳಿದ ಕತೆ, ಕೊನೆಗೆ ಪಂಥ ಸ್ವೀಕರಿಸಿದ ತಾನು ಬಸ್ ನಿಲ್ದಾಣದ ಎದುರಿಗಿದ್ದ 'ಟಾಕೀಸ್'ನೊಳಕ್ಕೆ ಹೋಗಿದ್ದು, ಒಳಗಡೆ, ಬಾಲ್ಕನಿಯಾಚೆ, 'ಪ್ರೊಜೆಕ್ಟರ್ ರೂಮಿ'ನಲ್ಲಿ ಕಂಡಂತಾದ ಬೆಳಕು, ಬಾಲ್ಕನಿಯ ಮೆಟ್ಟಿಲುಗಳ ಪಕ್ಕದ ಗೋಡೆಯ ಗೀರುಗಳು, ಖಾಲಿಯಿದ್ದ ಬಾಲ್ಕನಿ, ಬಾಲ್ಕನಿಯಿಂದ ಹೊರಬಂದು 'ಪ್ರೊಜೆಕ್ಟರ್ ರೂಮ್' ಮೆಟ್ಟಿಲು ಹತ್ತಬೇಕೆನ್ನುವಷ್ಟರಲ್ಲಿ ತನ್ನ ಹಿಂದೆ ಕೇಳಿಬಂದ ಶಬ್ದ... ಹಿಂತಿರುಗಿ ನೋಡಿದವನಿಗೆ ಕತ್ತಲೊಳಗೆ ಆದ ಅನುಭೂತಿ...' ಅಷ್ಟೇ ಮುಂದಕ್ಕೇನೂ ನೆನಪಿರಲಿಲ್ಲ. ದೊಡ್ಡದಾಗಿ ಉಸಿರು ಬಿಟ್ಟು ಪಕ್ಕದಲ್ಲಿ ಉರುಳಿಕೊಂಡಿದ್ದ ಸತೀಶನನ್ನು ತಿವಿದ, "ಲೋ, ಸತೀಶಾ?"

ಸತೀಶ ಅಲ್ಲಾಡಲಿಲ್ಲ. ಇವನು ಜೋರಾಗಿ ಅವನ ಪಕ್ಕೆ ತಿವಿದ, "ಲೋ, ಮಗನೇ!"

ಸತೀಶ ನಿದ್ದೆಯಲ್ಲೇ ಕನವರಿಸಿದ, "ಮ್..?"

ಅರುಣನಿಗೆ ಸಿಟ್ಟುಬಂತು, ಇನ್ನೂ ಜೋರಾಗಿ ಸತೀಶನನ್ನು ತಿವಿದ, "ಲೋ, ಏಳೋಲೇ!" ಸತೀಶ ಥಟ್ಟನೆ ಕಣ್ಣು ಬಿಟ್ಟ! ಇವನ ಗೊಂದಲ ತುಂಬಿದ ಮುಖ ನೋಡುತ್ತಲೇ ಮೆಲ್ಲನೆ ತುಟಿಯರಳಿಸಿದ. ತನ್ನ ಕೈಯನ್ನು ಪಕ್ಕದಲ್ಲಿ ಮಲಗಿದ್ದವರ ಮೇಲೆ ಹಾಕಿ, "ಏಳ್ರೋಲೇ, 'ರಾಮೇಗೌಡ'ರು ಎದ್ದು ಬಿಟ್ಟಿದಾರೆ." ಅನ್ನುತ್ತ ಎಲ್ಲರನ್ನೂ ತಿವಿದ. ಹ್ಯಾರಿ ಕಣ್ಣುಮುಚ್ಚಿಕೊಂಡೇ ಗಹಗಹಿಸಿನಕ್ಕ. ರಕ್ಷಿತ್ ಎದ್ದು ಕುಳಿತ. ಉಳಿದವರೂ ಎಲ್ಲರೂ ಎಚ್ಚರಾದರು, ನಗಲಾರಂಭಿಸಿದರು. ಅರುಣನ ಸಿಟ್ಟು ಇನ್ನೂ ಜಾಸ್ತಿಯಾಯ್ತು.

"ಏನ್ರೋಲೇ? ಎಲ್ರೂ ಸೇರ್ಕೊಂಡು ನನ್ನನ್ನು ಮಂಗನ ಮಾಡಿದ್ರಾ? ಏನಾಯ್ತು, ನಾನಿಲ್ಲಿಗೆ ಹೇಗೆ ಬಂದೆ?" ಸತೀಶ ಅಂಗಾತ ಮಲಗಿದ್ದಂತೆಯೇ ಕಟ್ಟು ಕತೆ ಹೊಡೆದ, "ನಿನ್ನೆ ರಾತ್ರಿ ನಿನ್ನನ್ನು ಬಾಲ್ಕನಿಯ ಮೆಟ್ಟಿಲುಗಳ ಮೇಲೆ ಕಂಡು 'ರಾಮೇಗೌಡ'ರು 'ಪ್ರೊಜೆಕ್ಟರ್ ರೂಮ್'ನಿಂದ ಬಂದು ಇನ್ನೇನು ಹಿಡ್ಕೋಬೇಕು ಅನ್ನೋವಷ್ಟರಲ್ಲಿ ನಾವೆಲ್ಲ ಬಂದು ನಿನ್ನನ್ನು ಕಾಪಾಡಿದ್ವಿ!"

ಅರುಣನ ಕೆಂಪು ಕೆಂಪಾಗುತ್ತಿದ್ದ ಮುಖ ನೋಡಿ ರಕ್ಷಿತ್ ಮೆಲ್ಲಗೆ ರಹಸ್ಯ ಬಯಲು ಮಾಡಿದ, "ನಾನೂ ನಿನ್ನ ಹಿಂದೆ, ನಿನಗೆ ಗೊತ್ತಾಗದಂತೆ ಟಾಕೀಸ್‌ನೊಳಕ್ಕೆ ಬಂದಿದ್ದೆ!"

"ಹಾಂ?" ಅವನ ಅಚ್ಚರಿಯ ಮುಖ ನೋಡಿ ಮತ್ತೆ ಎಲ್ಲರೂ ನಕ್ಕರು.

"ಹೌದು, ನಿನ್ನ ಹಿಂದೇನೇ, ನಿನ್ನ ಟಾರ್ಚ್ ಬೆಳಕನ್ನು ನೋಡುತ್ತ, ಸ್ವಲ್ಪ ದೂರದಲ್ಲೇ ನಿನ್ನನ್ನೇ ಫಾಲೋ ಮಾಡಿಕೊಂಡು ಬಂದೆ. ನೀನು ಬಾಲ್ಕನಿಯ ಮೆಟ್ಟಿಲುಗಳನ್ನು ಹತ್ತಿ ಬಾಲ್ಕನಿಯ ಒಳ ಹೋದಾಗ, ನಾನು ಮೆಟ್ಟಿಲುಗಳ ಕೆಳಗೇ ನಿಂತು ಕಾದೆ. ಯಾಕೇಂದ್ರೆ ಬಾಲ್ಕನಿಯಿಂದ ಹೊರಬಂದವನಿಗೆ ನಾನು ಕಾಣಬಾರದಲ್ಲ! ನೀನು ಬಾಲ್ಕನಿಯಿಂದ ಹೊರಬಂದು, 'ಪ್ರೊಜೆಕ್ಟರ್ ರೂಮ್' ಮೆಟ್ಟಿಲು ಹತ್ತ್ತೋಕೆ ಅಂತಾ ಹೋಗಿ, ಮತ್ತೆ ಯಾಕೋ ನಿಂತು, ಹಿಂತಿರುಗಿ ನೋಡಿದೆಯಲ್ಲಾ–ಆಗ ನಿನ್ನ ಮುಖ ನೋಡಿಯೇ ನನಗೆ ಭಯವಾಯ್ತು. ನೀನು ಕುಸಿದುಬಿದ್ದೆ, ನಾನು ತಕ್ಷಣ ಇವರಿಗೆಲ್ಲ ಮೊಬೈಲಿನಲ್ಲಿ ಸುದ್ದಿಕೊಟ್ಟೆ. ಎಲ್ಲರೂ ಬಂದು, ನಿನ್ನನ್ನು ಹೊತ್ಕೊಂಡ್ ಬಸ್ ನಿಲ್ದಾಣಕ್ಕೆ ಬಂದೆವು."

ಹ್ಯಾರಿ ಕತೆ ಮುಂದುವರೆಸಿದ, "ಅಷ್ಟೊತ್ತಿಗೆ ನಿಮ್ಮ ಮನೆಯಿಂದ ಜೀಪು ತಗೊಂಡು ನಿಮ್ಮಣ್ಣ ಬಂದ. ನೀನು ಹಾಗೆ ಪ್ರಜ್ಞೆ ತಪ್ಪಿರೋದನ್ನು ಕಂಡು ಅವನೂ ಗಾಬರಿಯಾಗಿ, ಮನೆಗೆ ಫೋನ್ ಮಾಡಿ ತಿಳಿಸಿದ, ಬೈಕ್ ಮೇಲೆ ನಿಮ್ಮಪ್ಪ ಮತ್ತೆ ನಿಮ್ಮ ಡಾಕ್ಟರ್–ಅಂಕಲ್ ಇದಾರಲ್ಲ..."

"ಸರ್ವೇಶ್–ದೊಡ್ಡಪ್ಪಾ?" ಅರುಣ ಕೇಳಿದ,

"ಹೂಂ, ಅವರೇ. ಅವರೂ ನಿಮ್ಮಪ್ಪನೂ ಇಬ್ಬರೂ ಬಂದು ನೋಡಿದ್ರು. ಗಾಬರಿಯೇನಿಲ್ಲ, ಮನೆಗೆ ಕರ್ಕೊಂಡು ಹೋಗೋಣ, ಬೆಳಗ್ಗೆಗೆ ಎಚ್ಚರಾಗ್ತಾನೆ ಅಂದ್ರು. ನಾವೆಲ್ಲ ಜೀಪ್ ಹತ್ಕೊಂಡು, ನಮ್ಮ ಬ್ಯಾಗುಗಳ ಜೊತೆ ನಿನ್ನ ಬಾಡಿನೂ ಹೇರಿಕೊಂಡು ಇಲ್ಲಿಗೆ ಬಂದೆವು!"

ಎಲ್ಲರೂ ಮತ್ತೊಂದು ಸುತ್ತು ನಕ್ಕರು, ಅರುಣನೂ ಮೆಲ್ಲನೆ ಅವರ ನಗುವಿನಲ್ಲಿ ಭಾಗಿಯಾದ. ಅಷ್ಟರಲ್ಲಿ ಇವರ ನಗು ಕೇಕೆ ಕಂಡು, ಅರುಣನ ಅಮ್ಮ ರೂಮಿನೊಳಕ್ಕೆ ಬಂದರು. ಇವನನ್ನು ಕಂಡು ಹೃದಯಪೂರ್ವಕವಾಗಿ ನಕ್ಕರು.

"ಏನ್ರೋ, ನನ್ನ ಮಗ ಎದ್ದಿದಾನೆ?" ಅರುಣ ಅವರನ್ನು ನೋಡಿ ನಕ್ಕ, ಅರುಣನ ಅಪ್ಪ, ದೊಡ್ಡಪ್ಪ, ಅಣ್ಣ ಎಲ್ಲರೂ ರೂಮಿನೊಳಕ್ಕೆ ಬಂದರು.

"ನಿಮ್ಮಗಳ ತರಲೆಯಿಂದಾಗಿ ರಾತ್ರಿಯಿಂದ ಯಾರಿಗೂ ನಿದ್ದೆಯಿಲ್ಲ!" ಅರುಣನ ಅಪ್ಪ ದೂರಿದರು.

"ಹೇಗಿದೀಯಾಪ್ಪಾ ಅರುಣಾ?" ಅವನ ಡಾಕ್ಟರ್–ದೊಡ್ಡಪ್ಪ ಅವನ ಬಳಿ ಬಂದು ಕುಳಿತು, ಕೇಳಿದರು.

"ಚೆನ್ನಾಗಿದೀನಿ!"

"ಗುಡ್! ಎಲ್ರೂ ಎದ್ದು ಬಿಡಿ, ತುಂಬಾ ಕೆಲಸ ಇವೆ!"

"ಹೌದು, ಕಾಫಿ ಕುಡಿದು ಸ್ನಾನ ಮುಗಿಸ್ಕೊಂಡ್ ಬಿಡಿ!" ಅರುಣನ ಅಮ್ಮ ಸಲಹೆ ಕೊಟ್ಟರು.

ಸತೀಶ ಯಥಾಪ್ರಕಾರ, ಹಾಗೇ ಹೊರಳಿ, "ಇನ್ನೊಂದೈದು ನಿಮಿಷ ಆಂಟಿ, ಎದ್ದು ಬಿಡ್ತೀವಿ!" ಎಂದು ಕಣ್ಣು ಮುಚ್ಚಿದ. ಎಲ್ಲರೂ ಹಾಗೇ ಹೊರಳಿಕೊಂಡಿದ್ದನ್ನು ನೋಡಿ, ಹಿರಿಯರೆಲ್ಲ ರೂಮಿನಿಂದ ಹೊರ ಹೊರಟರು. ಅರುಣನ ಅಮ್ಮ ಇವನನ್ನುದ್ದೇಶಿಸಿ, "ಎಲ್ರನ್ನೂ ಎಬ್ಬಿಸಿಕೊಂಡು, ಹಿಂದುಗಡೆ ಬಾಗಿಲಿನಲ್ಲಿ ಬಂದುಬಿಡೋ, ಮುಂದಿನ ಬಾಗಿಲಿನಲ್ಲಿ ಓಡಾಡಬೇಡಿ, ಇನ್ನೂ ಹಸು ನುಗ್ಗಿಸಿಲ್ಲ!" ಅಂದರು. ಇವನು ತಲೆಯಾಡಿಸಿ, ಮೆಲ್ಲಗೆ ಹಾಗೇ ಚಾಪೆ ಮೇಲೆ ಉರುಳಿಕೊಂಡ.

------------

ಅರುಣನ ತಲೆಯ ಮೇಲೆ ಫ್ಯಾನ್ ಮೆಲ್ಲನೆ ಸುತ್ತುತ್ತಿತ್ತು. ರಾತ್ರಿ ತಾನು ಏನನ್ನು ನೋಡಿ ತಾನು ಹೆದರಿಕೊಂಡೆ ಎಂಬುದನ್ನು ನೆನಪಿಸಿಕೊಳ್ಳಲಾರಂಭಿಸಿದ ಅರುಣನ ಎದೆಯ ಬಡಿತ ಇದ್ದಕಿದ್ದಂತೆಯೇ ಜೋರಾಯಿತು, ಮೈಯೆಲ್ಲ ಬೆವರಿದಂತಾಗಿ ತಲೆ ಸುತ್ತುಬಂತು. ತನ್ನ ನೆನಪನ್ನೆಲ್ಲ ಎಷ್ಟೇ ಜಾಲಾಡಿದರೂ ಅವನಿಗೆ 'ಪ್ರೊಜೆಕ್ಟರ್ ರೂಮಿ'ನ ಮೆಟ್ಟಿಲು ಹತ್ತುವ ಮುನ್ನ ತಾನು ತಿರುಗಿ ಏನನ್ನೋ ನೋಡಿ ಹೆದರಿದ್ದು ನಿಜವಾದರೂ, ನೋಡಿದ್ದು ಏನು ಎಂದು ನೆನಪಿಗೆ ಬರಲಿಲ್ಲ. ರಾತ್ರಿ ತಾನು ನಿಜವಾಗಿ ಕಂಡದ್ದು ಈ ಮುಂಜಾನೆ ತನಗೆ ಬಿದ್ದ ದುಃಸ್ವಪ್ನದಷ್ಟು ಸೌಮ್ಯವಾಗಿರಲಿಲ್ಲ ಎಂಬುದು ಮಾತ್ರ ಗೊತ್ತಾಯಿತು!

ಮೆಲ್ಲನೆದ್ದು ಕುಳಿತು ಮಲಗಿದ್ದ ತನ್ನ ಸ್ನೇಹಿತರನ್ನೆಲ್ಲ ನೋಡಿದ. ಅವನಿಗೆ ತನ್ನ ಕನಸು, ಸ್ಥಿತಿ ಕಂಡು ನಗು ಬಂತು. ತನಗ್ಯಾವುದೋ ವಿಚಿತ್ರ ಅನುಭೂತಿಯಾದದ್ದು ನಿಜ, ಆದರೆ ಅದರ ಹಿಂದಿನ ರಹಸ್ಯವನ್ನು ಕಂಡು ಹಿಡಿಯುವುದಾದರೂ ಹೇಗೆ? ಯೋಚಿಸುತ್ತ ಅವರನ್ನೆಲ್ಲ ಅಲ್ಲೇ ಮಲಗಲು ಬಿಟ್ಟು, ಮನೆಯ ಹಿಂದಿನ ಬಾಗಿಲಿನಿಂದ ಹೊರಬಂದ. ಹಿತ್ತಿಲಿನಲ್ಲಿ ಶಾಮಿಯಾನ ಹಾಕಿ ಬೆಳಗಿನ ತಿಂಡಿ, ಮದ್ಯಾಹ್ನದ ಊಟದ ಸಿದ್ದತೆ ನಡೆದಿತ್ತು. ಗೃಹಪ್ರವೇಶದ ಕಾರಣ ಇಡೀ ಮನೆಯ ಸಾಮಾನು–ಸರಂಜಾಮು ಮನೆಯ ಹಿತ್ತಿಲಿನ ಔಟ್‌ಹೌಸ್‌ಗೆ ಸ್ಥಳಾಂತರಗೊಂಡಿತ್ತು, ಅಲ್ಲೇ ಇದ್ದ ಬಚ್ಚಲುಮನೆಯ ಹಂಡೆಯಲ್ಲಿ ಬಿಸಿಬಿಸಿ ನೀರು ಕಾಯುತ್ತಿತ್ತು.

ಅರುಣನ ಅಮ್ಮ ಬಂದು, "ಅವ್ರೆಲ್ಲಾ ಮಲ್ಗಿದಾರಾ? ಇರ್ಲಿ ಬಿಡು, ಬಾಯಿ ತೊಳ್ಕೋ, ಕಾಫಿ ಕುಡೀವಂತೆ!" ಅಂದರು. ಇವನು ಹೂಂಗುಟ್ಟುತ್ತ ಬಚ್ಚಲು ಮನೆ ಹೊಕ್ಕ. ಎಡಗೈಯಲ್ಲಿ ಬಚ್ಚಲು ಕಟ್ಟೆಯ ಮೇಲಿದ್ದ ಚೊಂಬು ತೆಗೆದುಕೊಂಡು ಬಲಗೈಗೆ ನೀರು ಹೊಯ್ದುಕೊಳ್ಳಬೇಕು–ನೆನಪಿನ ಸುಳುಹೊಂದು ಮಿದುಳಿಗೆ ಹೊಳೆದಂತಾಗಿ ತಟ್ಟನೆ ಹಾಗೇ ನಿಂತ! ತನ್ನ ಬಲಗೈ ತೋರು ಬೆರಳನ್ನು ನೋಡಿಕೊಂಡ! ತೋರು ಬೆರಳ ತುದಿಯಲ್ಲಿ ಅರೆಬರೆ ಒರೆಸಲ್ಪಟ್ಟ ಕಡುಗೆಂಪನೆಯ ದ್ರವದ ಕಲೆ!

ಬಚ್ಚಲು ಬಿಟ್ಟು, ದಡಬಡ ರೂಮಿಗೆ ಬಂದವನೇ ಮೂಲೆಯಲ್ಲಿ ಪೇರಿಸಿಟ್ಟಿದ್ದ ಬ್ಯಾಗುಗಳನ್ನೆಲ್ಲ ತಡಕಾಡಿ ರಕ್ಷಿತನ ಡಬ್ಬಾ ಮೊಬೈಲ್ ಹೊರತೆಗೆದ. ಹೌದು, ಮೊಬೈಲಿನ ಮೇಲ್ಮೈ ಮೇಲೆ ತನ್ನದೇ ತೋರುಬೆರಳಿನಲ್ಲಿದ್ದ ಕಡುಗೆಂಪು ಬಣ್ಣದ ಕಲೆಯ ಒರೆಸುವಿಕೆಯಿಂದಾದ ಬೆರಳ ತುದಿಯ ಮಾಸಲು ಗುರುತುಗಳು!

"ಸತೀಶಾ..., ರಕ್ಷಿತ್... ಹ್ಯಾರಿ... ಏಳ್ರೋ!" ಎಲ್ಲರನ್ನೂ ತಿವಿದು ತಿವಿದು ಎಬ್ಬಿಸಿದ ಅರುಣ ಅವರೆಲ್ಲರಿಗೂ ತಾನು ನಿನ್ನೆ ರಾತ್ರಿ ಟಾಕೀಸಿನ ಬಾಲ್ಕನಿಯ ಮೆಟ್ಟಿಲುಗಳ ಪಕ್ಕದ ಗೋಡೆಯುದ್ದಕ್ಕೂ ಕಂಡ ಗೀರುಗಳು, ಆ ಗೀರುಗಳೊಳಗೆ ಒಸರಿದ್ದಂತೆ ಇದ್ದ ಕಡುಗೆಂಪು ದ್ರವದ ಕತೆ ಹೇಳಿದ. ಸಿಡುಕುತ್ತ, ಶಪಿಸುತ್ತ ಎದ್ದು ಕುಳಿತು ಇವನ ಕತೆ ಕೇಳಿದ ಎಲ್ಲರ ನಿದ್ದೆಯೂ ಹಾರಿ ಹೋಯಿತು. ಎಲ್ಲರೂ ಇವನ ಬಲಗೈ ತೋರುಬೆರಳಿನ ಕಲೆ, ರಕ್ಷಿತನ ಫೋನ್‌ನ ಮೇಲಿದ್ದ ಕಲೆಗಳನ್ನು ನೋಡಿದರು. ಎಲ್ಲರೂ ಮೌನವಾಗಿ ಕುಳಿತೇ ಇದ್ದರು. ನಿಟ್ಟುಸಿರು ಬಿಟ್ಟ ಹ್ಯಾರಿ ನುಡಿದ,

"ಮಗನೇ, ಟಿಟ್–ಫಾರ್–ಟ್ಯಾಟ್ ಅಂತಾ ನೀನೇನಾದರೂ ಕತೆ ಕಟ್ತಾ ಇದೀಯಾ ಅಂದ್ರೆ ತಿಳ್ಕೋ–ನೀನು ಸತ್ತೆ! ಇಟ್ಸ್ ಬೆಟರ್ ಬಿ ಟ್ರು". ಕಿರುನಕ್ಕು ಸತೀಶನೂ ತಲೆಯಾಡಿಸಿದ. ಆದರೆ ಅರುಣನ ಮುಖದಲ್ಲಿ ನಗುವಿನ ಒಂದು ಎಳೆಯೂ ಇರಲಿಲ್ಲ.

————————————

"ಇಟ್ಸ್ ಬೆಟರ್ ಬಿ ಟ್ರು ಮಗಾ!"

ಹುಡುಗರೆಲ್ಲ ಟಾಕೀಸಿನ ಕಾಂಪೌಂಡ್ ಗೋಡೆ ಪ್ರವೇಶಿಸುತ್ತಿದ್ದಂತೆಯೇ ಹ್ಯಾರಿ ಈಗಾಗಲೇ ಇಪ್ಪತ್ತಕ್ಕೂ ಹೆಚ್ಚು ಬಾರಿ ಹೇಳಿದ್ದ ಹಳಸಲು ಬೆದರಿಕೆಯ ಮಾತನ್ನೇ ಮತ್ತೆ ಹೇಳಿದ.

ಸತೀಶನಿಗೆ ರೇಗಿತು, "ಸ್ವಲ್ಪ ಬಾಯಿ ಮುಚ್ಕೊಂತೀರಾ ಸಾರ್? ಬೆಳಗಿನಿಂದ ಇದೇ ಡೈಲಾಗ್ ಕೇಳಿ ಕೇಳಿ ಬೋರ್ ಬಂದ್ಹೋಗಿದೆ!" ಎಲ್ಲರೂ ನಕ್ಕರು, ಅರುಣನನ್ನುಳಿದು!

ಗೃಹಪ್ರವೇಶದ ಕಾರ್ಯಕ್ರಮಗಳೆಲ್ಲ ಮುಗಿದು, ಊಟಮಾಡಿಕೊಂಡು, ಹುಡುಗರೆಲ್ಲ ವಾಪಸ್ಸು ಬೇಲೂರಿಗೆ ಚನ್ನಕೇಶವ ದೇವಸ್ಥಾನ ನೋಡಲು ಬಂದಿದ್ದರು. ಅವರಿಗೆ ದೇವಸ್ಥಾನ ನೋಡುವುದಕ್ಕಿಂತ ಮತ್ತೆ ಟಾಕೀಸ್‌ನೊಳಕ್ಕೆ ಹೋಗಿ ಅರುಣ ಹೇಳಿದ್ದ ಕತೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ತವಕವಿದ್ದರೂ, ತಮ್ಮ ಗುಂಪಿನ ಜೊತೆಗೆ ಅರುಣನ ಅಣ್ಣನೂ ಬಂದಿದ್ದುದರಿಂದ ಬಾಯಿ ಮುಚ್ಚಿಕೊಂಡು, ಅದರ ವಿಷಯವನ್ನೇನೂ ಮಾತನಾಡದೇ ದೇವಸ್ಥಾನವನ್ನೆಲ್ಲ ನೋಡಿದರು. ಯಾರದೋ ಫೋನ್ ಬಂತೆಂದು ಐದುಗಂಟೆಗೆಲ್ಲ ಅರುಣನ ಅಣ್ಣ, ಹತ್ತು ನಿಮಿಷದಲ್ಲಿ ವಾಪಸ್ಸು ಬರುವುದಾಗಿ ಜೀಪು ತೆಗೆದುಕೊಂಡು ಹೋದ ಮೇಲೆ ಹುಡುಗರೆಲ್ಲ ತರಾತುರಿಯಲ್ಲಿ ಒಟ್ಟಾಗಿ ಟಾಕೀಸ್‌ನ ಬಳಿ ಬಂದಿದ್ದರು.

ಎಲ್ಲರೂ ಮಾತಾಡಿಕೊಳ್ಳುತ್ತಲೇ ಕಾಂಪೌಂಡ್ ಗೋಡೆ ದಾಟಿ, ಅಂಗಳ ಹಾದು, ಮೆಟ್ಟಿಲುಗಳ ಹತ್ತಿ, ಹೊರಪ್ರಾಂಗಣ ಹೊಕ್ಕರು. ಯಾಕೋ ಎಲ್ಲರ ಮಾತೂ ಪಿಸುಮಾತಿಗೆ ಬದಲಾಯಿತು. ಎಲ್ಲರ ಉಸಿರಾಟವೂ ಎಲ್ಲರಿಗೂ ಕೇಳಿಸುವಷ್ಟು ಭಾರವಾಯಿತು. ಒಳ ಪ್ರಾಂಗಣದ ಬಾಗಿಲಲ್ಲಿ ನಿಂತ ಅರುಣ ತೋರಿಸಿದ,

"ಈ ಕಡೆ ಸ್ಕ್ರೀನ್, ಇಲ್ಲಿ ಬಲಗಡೆ ಬಾಲ್ಕನಿಯ ಕಟ್ಟೆ, ಅಲ್ಲಿ ಬಾಲ್ಕನಿಯ ಹಿಂದಿನ ಗೋಡೆಯಲ್ಲಿ ಚಚ್ಚೌಕದ ಕಿಂಡಿಗಳಿವೆಯಲ್ಲ, ಅವುಗಳ ಹಿಂದೆಯೇ 'ಪ್ರೊಜೆಕ್ಟರ್ ರೂಮ್'!" ಕತ್ತಲ ಕಿಂಡಿಗಳಲ್ಲಿ ಬೆಳಕೇನಾದರೂ ಕಾಣುವುದೇನೋ ಎಂಬಂತೆ ಎಲ್ಲರೂ ಉಸಿರು ಬಿಗಿಹಿಡಿದು ನೋಡಿದರು!

"ಬಾಲ್ಕನಿಯ ಮೆಟ್ಟಿಲುಗಳೆಲ್ಲಿವೆ?" ಎಲ್ಲವನ್ನೂ ನೋಡಿ, ಹೊರಹೋಗಿಬಿಡುವ ಆತುರದಲ್ಲಿದ್ದವನಂತೆ ಸತೀಶ ಕೇಳಿದ. ಉಳಿದವರೆಲ್ಲ ಮೌನವಾಗಿದ್ದರೂ ಅವನಷ್ಟೇ ಆತುರ ಅವರಿಗೂ ಇದ್ದಂತೆನಿಸಿತು.

ಅವರನ್ನೆಲ್ಲ ಮತ್ತೆ ಹೊರ ಪ್ರಾಂಗಣಕ್ಕೆ ಕರೆದುಕೊಂಡು, ಅರುಣ ಟಾಕೀಸ್‌ನ ಹಿಂಬಾಗಕ್ಕೆ ಬಾಲ್ಕನಿಯ ಮೆಟ್ಟಿಲುಗಳ ಕಡೆಗೆ ನಡೆದ. ಸಂಜೆಗತ್ತಲು ದಟ್ಟವಾಗುತ್ತಿದ್ದಂತೆಯೇ ಹುಡುಗರ ಕೈಯಲ್ಲಿದ್ದ ಮೊಬೈಲ್‌ಗಳು ಬೆಳಕು ಬೀರಿದವು.

ಬಾಲ್ಕನಿಗೆ ಹೋಗುವ ಮೆಟ್ಟಿಲುಗಳ ಸರಣಿಯ ತಳಕ್ಕೆ ಬಂದು ನಿಂತ ಅರುಣ. ಅವನ್ ಹಿಂದೆ ಬಂದು ನಿಂತ ಹುಡುಗರು ಅವನ ದೃಷ್ಟಿಯನ್ನೇ ಅನುಸರಿಸಿ ಮೆಟ್ಟಿಲುಗಳನ್ನು ನೋಡಿದರು. ಅವರೆಲ್ಲ ನಿಂತಿದ್ದ ಎಡಗಡೆಗೆ ಟಾಕೀಸ್‌ನ ಹಿಂಬದಿಯ ಗೋಡೆ, ಗೋಡೆಗೆ ಅಂಟಿಕೊಂಡಂತೆ ಮೆಟ್ಟಿಲುಗಳು, ಆ ಮೆಟ್ಟಿಲುಗಳು ಮೇಲೆಲ್ಲೋ ಕೊನೆಯಾಗಿ ಗೋಡೆಯಲ್ಲಿ, ಬಾಲ್ಕನಿ ಪ್ರವೇಶಿಸುವ ದ್ವಾರ, ಆ ದ್ವಾರದ ಆಚೆಗೆ ಇನ್ನಷ್ಟು ಸಣ್ಣ ಮೆಟ್ಟಿಲುಗಳ ಸರಣಿ, 'ಪ್ರೊಜೆಕ್ಟರ್ ರೂಮ್'ಗೆ ಹೋಗಲು. ಇವಿಷ್ಟೂ ಅರುಣ ವಿವರಿಸದಿದ್ದರೂ ಹುಡುಗರಿಗೆಲ್ಲ ಅರ್ಥವಾಯಿತು.

“ನೀನು ಹೇಳಿದ ಗೀರುಗಳೆಲ್ಲಿ?” ಹ್ಯಾರಿ ಇನ್ನೂ ಮುಖ್ಯ ವಿಷಯ ಮರೆತಿರಲಿಲ್ಲ.

ಅರುಣ ಮೌನವಾಗಿ ತನ್ನ ಕೈಯಲ್ಲಿದ್ದ ಮೊಬೈಲ್ ಬೆಳಕನ್ನು ಬಾಲ್ಕನಿಯ ಮೆಟ್ಟಿಲುಗಳ, ಪಕ್ಕದ ಎಡಗೋಡೆಗೆ ಹಾಯಿಸಿದ. ಅಲ್ಲಿದ್ದವು, ಆಳವಾಗಿ, ಹರಿತವಾದ ಆಯುಧದಿಂದ ಎಳೆದಂತೆ ಎಳೆದಿದ್ದ ಗೀರುಗಳು! ನಿಸ್ಸಹಾಯಕತೆಯಲ್ಲಿ, ಬಲವಾಗಿ ಉಗುರುಗಳಿಂದ ಎಳೆದರೂ ಸಿಮೆಂಟ್ ಗೋಡೆಯಲ್ಲಿ ಅಷ್ಟು ಆಳದ ಗೀರುಗಳು ಬೀಳಬಹುದಾ? ಗೊತ್ತಿಲ್ಲ! ಆದರೆ ಆ ಗೀರುಗಳಲ್ಲಿ ಅರುಣ ಹೇಳಿದ ಹಾಗೆ ಕಡುಗಪ್ಪು ದ್ರವವಿರಲಿಲ್ಲ!

------------

“ನಿಜ ಹೇಳು ರಕ್ಷಿತ್! ನಿನ್ನೆ ರಾತ್ರಿ ನಾನು ನಿನ್ನನ್ನೇನಾದ್ರೂ ಇಲ್ಲಿ, ಬಾಲ್ಕನಿಯ ಮೆಟ್ಟಿಲುಗಳ ಕೆಳಗೆ ನೋಡಿ ಹೆದರಿಕೊಂಡೆನಾ?” ಅರುಣ ಕೇಳಿದ.

“ಚಾನ್ಸೇ ಇಲ್ಲ ಅರುಣ. ನೀನು ಬಾಲ್ಕನಿಯೊಳಕ್ಕೆ ಹೋಗಿ ವಾಪಸ್ಸು ಹೊರ ಬಂದವನು, ‘ಪ್ರೊಜೆಕ್ಟರ್’ ರೂಮ್‌ಗೆ ಹೋಗಬೇಕೆಂದು ಆ ಮೆಟ್ಟಿಲುಗಳನ್ನು ಹತ್ತಲು ಹೋಗಿ ಥಟ್ಟನೇ ನಿಂತೆ, ಮುಖ ಒರೆಸಿಕೊಂಡೆ, ಆಮೇಲೆ ಬೆಚ್ಚಿ ಬಿದ್ದವನಂತೆ ಹಿಂತಿರುಗಿ ಇತ್ತ ಕಡೆ ನೋಡಿದೆ. ಆದ್ರೆ ನಿನ್ನ ದೃಷ್ಟಿ ನೇರವಾಗಿತ್ತೇ ಹೊರತು, ಕೆಳಮುಖವಾಗಿ ಇಲ್ಲಿ ನಿಂತಿದ್ದ ನನ್ನೆಡೆಗೆ ಇರಲಿಲ್ಲ. ಇನ್-ಫ್ಯಾಕ್ಟ್ ನೀನು ನನ್ನನ್ನು ನೋಡಿ ಹೆದರಲಿಲ್ಲ, ನಾನು ನಿನ್ನ ಮುಖ ನೋಡಿ ಹೆದರಿಹೋದೆ! ನಿನ್ನ ಮುಖ ಪೂರ್ತಿ ಬೆಳ್ಳಗಾಗಿತ್ತು.”

“ಹಾಗಾದ್ರೆ ಹಿಂತಿರುಗಿದಾಗ ನನ್ನ ಕಣ್ಣ ಮುಂದೆ ಯಾರಿದ್ದರು?”

“ನಿನ್ನೆದುರು ಯಾರಿದ್ದರು? ಯಾರೂ ಇರಲಿಲ್ಲ! ಆದರೆ ನೀನು ಮಾತ್ರ ಶೂನ್ಯವನ್ನೇ ನೋಡಿ, ಸಾವನ್ನೇ ನೋಡಿದವನಂತೆ ಬಿಳಚಿ ಹೋಗಿದ್ದೆ! ಪೂರ್ತಿ ಬೆವರಿ, ನಡುಗುತ್ತ, ಬಾಯಿ ವಕ್ರವಾಗಿ ಇಷ್ಟಗಲ ಮಾಡಿ, ಕಿರುಚಲು ಹೋಗಿ, ಆಗದವನಂತೆ ಮೆಲ್ಲನೆ ಕಣ್ಣು ಮುಚ್ಚಿಕೊಳ್ಳುತ್ತ ಕುಸಿದು ಬಿದ್ದೆ. ನೀನು ಬಿದ್ದದ್ದು ನೋಡಿ ನಾನು ಸಂಪೂರ್ಣ ಬೆದರಿ ಬೆಚ್ಚಿಹೋದೆ. ನನ್ನನ್ನೇ ಏನಾದ್ರೂ ಹೆದರಿಸಲು ನಾಟಕ ಮಾಡ್ತಾ ಇದೀಯಾ ಅಂತಾ ಅಂದ್ಕೊಂಡ್ರೂ, ಹೆಚ್ಚಿಗೆ ಯೋಚಿಸದೇ ಬಸ್‌ನಿಲ್ದಾಣದಲ್ಲಿದ್ದ ಇವರನ್ನೆಲ್ಲ ತಕ್ಷಣ ಮೊಬೈಲಿನಲ್ಲಿ ಕರೆದೆ. ಎಲ್ಲರೂ ಓಡಿಬಂದರು, ಮುಂದಿನದೆಲ್ಲ ನಿನಗೆ ಬೆಳಿಗ್ಗೇನೇ ಹೇಳಿದ್ವಿ!”

“ಇಲ್ಲ!” ಏನನ್ನೋ ಯೋಚಿಸುತ್ತ ಅರುಣ ನುಡಿದ. ಎಲ್ಲರೂ ಅವನನ್ನೇ ನೋಡಿದರು.

“ಏನು ಇಲ್ಲ?” ರಕ್ಷಿತ್ ಕೇಳಿದ.

“ಪ್ರೊಜೆಕ್ಟರ್ ರೂಮ್‌ಗೆ ಹೋಗುವ ಮೊದಲನೇ ಮೆಟ್ಟಿಲು ಹತ್ತಿದ ಕೂಡಲೇ ನನ್ನ ಹಿಂದೆ ಏನೋ ಶಬ್ದ ಬಂತು. ನಾನು ಆ ಕಡೆಯಿಂದ ಹ್ಯಾರಿ ನನ್ನನ್ನು ಹೆದರಿಸಲು ಏನೋ ಶಬ್ದ ಮಾಡ್ತಾ ಇದಾನೆ ಅಂತಾ ಅಂದ್ಕೊಂಡೆ. ಆದ್ರೆ ಆ ಕಡೆಯಿಂದ ಸತೀಶ ಕಿರುಚಿಕೊಳ್ತಾಯಿದ್ದ. ‘ಅದೇನೋ ಶಬ್ದಾ’ ಅಂತಾ! ನನ್ನ ಹಿಂದೆಯೇ ಏನೋ ಇದ್ದಂತಾಗಿ ನಾನು ಹಿಂತಿರುಗಿ ನೋಡಿದೆ!” ಅರುಣನ ಮುಖ ಬಿಳಿಚಿಕೊಂಡಿತು.

“ಹೌದು,” ಸತೀಶ ನುಡಿದ, “ನನಗೆ ಫೋನಿನಲ್ಲೇ ಏನೋ ಕರ್ಕಶವಾದ ಶಬ್ದ ಕೇಳಿದಂತಾಯ್ತು. ಇಂಥಾ ಶಬ್ದ ಅಂತಾ ವಿವರಿಸೋಕೇ ಆಗಲ್ಲ, ಅಂಥಾ ಶಬ್ದ ಅದು. ಅದಕ್ಕೇ ನಾನು ಕೇಳಿದೆ!” ಎಲ್ಲರೂ ಮೌನವಾದರು.

ಹ್ಯಾರಿ ಅರುಣ-ಸತೀಶ ಇಬ್ಬರನ್ನೂ ಅನುಮಾನದಿಂದ ನೋಡುತ್ತ ಕೇಳಿದ, “ಮತ್ತೆ, ಈ ಗೋಡೆಯ ಗೀರುಗಳಲ್ಲಿ ನಿನ್ನೆ ರಾತ್ರಿ ಇದ್ದ ರಕ್ತ ಯಾಕಿಲ್ಲ?” ಗೋಡೆಯ ಗೀರುಗಳನ್ನು ತನ್ನ ಬೆರಳುಗಳಿಂದ ಮೆಲ್ಲನೆ ಸವರಿ ನೋಡಿದ, “ಈ ಗೀರುಗಳು ಹಳೆಯವೇ ಇರಬಹುದು ಆದರೆ ನಿನ್ನ ಕತೆಯ ಪ್ರಕಾರ ಇದರಲ್ಲಿ ಇರಬೇಕಾದ ರಕ್ತ ಇಲ್ಲ!” ಯಾವುದೋ ಕಪಟ-ನಾಟಕವನ್ನು ಬಯಲು ಮಾಡುತ್ತಿರುವವನಂತೆ ಮೆಲ್ಲನೆ ತುಟಿಯರಳಿಸಿ ನಕ್ಕ, ಆದರೆ ಅವನೊಡನೆ ನಗಲು ಬೇರೆ ಯಾರೂ ತಯಾರಿರಲಿಲ್ಲ.

“ನಿನ್ನೆ ರಾತ್ರಿ ನಾನು ನೋಡಿದಾಗ ಈ ಗೀರುಗಳಲ್ಲೆಲ್ಲ ದ್ರವ ಇದ್ದದ್ದು ನಿಜ. ಅದು ರಕ್ತವೋ ಮತ್ತೊಂದೋ ಗೊತ್ತಿಲ್ಲ. ನೀನೇ ನೋಡಿದ್ಯಲ್ಲಾ, ನನ್ನ ಕೈಬೆರಳುಗಳು, ರಕ್ಷಿತನ ಮೊಬೈಲ್ ಫೋನು?” ವಿವರಿಸುತ್ತಿದ್ದ ಅರುಣನ ಧ್ವನಿ ಬೇಡವೆಂದರೂ ನಡುಗುತ್ತಿತ್ತು.

“ಸರಿ, ಆ ವಿಷಯ ಅಲ್ಲೇ ಬಿಟ್ಟುಬಿಡು! ಈಗ ಎಲ್ರೂ ಇದೀವಿ. ಮೇಲೆ ಹತ್ತಿ ಹೋಗಿ, ‘ಪ್ರೊಜೆಕ್ಟರ್ ರೂಮ್’ ನೋಡ್ಕೊಂಡೇ ಬಂದುಬಿಡೋಣ!”

“ಬೇಡ!” ಬದಲಾದ ಅರುಣನ ಧ್ವನಿ ಕೇಳಿ ಎಲ್ಲರೂ ಬೆಚ್ಚಿ ಬಿದ್ದರು. ಅರುಣ ನಖಶಿಖಾಂತ ನಡುಗುತ್ತಿದ್ದ, ಅವನ ಮುಖದ ಮೇಲೆ ಬೆವರಿನ ಸೆಲೆ ಶುರುವಾಗುತ್ತಿತ್ತು. “ನಿನ್ನೆ ರಾತ್ರಿ ನಾನು ಇಲ್ಲಿ ಏನನ್ನೋ ನೋಡಿ ಹೆದರಿಕೊಂಡಿದೀನಿ.

ಇವತ್ತಿಗಿನ್ನೂ ನಾನು ಬದುಕಿರೋದು ನನ್ನ ಅದೃಷ್ಟವೇ ಹೌದು! ಇನ್ನು ಇದನ್ನು ಮುಂದುವರೆಸೋದು ಬೇಡ!" ಸತೀಶ ಚಿಂತಿತನಾಗಿ, ಧೈರ್ಯ ಕೊಡುವವನಂತೆ ತನ್ನ ಕೈಗಳಿಂದ ಅರುಣನ ಹೆಗಲು ಬಳಸಿದ,

ಹ್ಯಾರಿಗಿನ್ನೂ ನಂಬಿಕೆ ಬಂದಿರಲಿಲ್ಲ. "ಯಾರಿಗ್ಗೊತ್ತು. ನೀವುಗಳಿಬ್ಬರೂ, ಅಲ್ಲ ನೀನು–ಸತೀಶ–ರಕ್ಷಿತ್ ಮೂವರೂ ಸೇರಿಕೊಂಡು ಇಷ್ಟು ದೊಡ್ಡದಾದ ಕತೆ ಯಾಕೆ ಕಟ್ಟಿರಬಾರದು?" ಸತೀಶನಿಗೆ ರೇಗಿತು.

"ಸಾಕು ಹ್ಯಾರಿ! ಅರುಣ ಹೇಳಿದ ಹಾಗೆ ಮಾಡೋಣ!"

ಹ್ಯಾರಿ ತಿರಸ್ಕಾರದ ಪೆಚ್ಚು ನಗೆ ನಕ್ಕು, "ನಾನಂತೂ ನೋಡ್ಕೊಂಡ್ ಬರ್ತೀನಿ, ನಮ್ಮ ಗುಂಪಲ್ಲಿ ನೀವಿಬ್ಬರೇನಾ ಧೈರ್ಯಶಾಲಿಗಳು?" ಅನ್ನುತ್ತ ಬಾಲ್ಕನಿಯ ಮೊದಲನೇ ಮೆಟ್ಟಿಲ ಮೇಲೆ ತನ್ನ ಹೆಜ್ಜೆಯನ್ನಿಟ್ಟ.

"ಬೇಡಾ ಹ್ಯಾರಿ!" ಬೆಚ್ಚಿಬಿದ್ದು ಅರುಣ ದೃಢವಾದ ಧ್ವನಿಯಲ್ಲಿ ನುಡಿದವನೇ ಹ್ಯಾರಿಯ ಕೊರಳ ಪಟ್ಟಿಯನ್ನು ಹಿಡಿದು ಕೆಳಕ್ಕೆ ಎಳೆದ!

------------

'ಪ್ರೊಜೆಕ್ಟರ್ ರೂಮ್'ನೊಳಗೆ...

ಕಾಲದ ಪರಿವೆಯಿಲ್ಲದೇ ಕಲೆತು ನಿಂತಿದ್ದ ಮೌನದಲ್ಲಿ, ವರ್ಷಗಳಿಂದ ಹೆಪ್ಪುಗಟ್ಟಿದ್ದ ಕತ್ತಲಲ್ಲಿ, ತುಂಬಿದ್ದ ಧೂಳಿನೊಳಗೆ ಮಾನವನ ಎಲ್ಲ ಇಂದ್ರಿಯಗಳಿಗೆ ಮೀರಿದ ಇರುವಿಕೆ(existence) ಯೊಂದು ಮೆಲ್ಲನೆ ಎಚ್ಚರಗೊಳ್ಳುತ್ತಿತ್ತು! ಎಚ್ಚರಗೊಳ್ಳುತ್ತಿತ್ತು ಎಂದರೆ ಅದು ಇಂದ್ರಿಯಾದಿ ಜ್ಞಾನವುಳ್ಳಂತಹುದು ಅಂತಾಗುತ್ತದೆಯೇನೋ, ಯಾಕೆಂದರೆ ಎಚ್ಚರಗೊಳ್ಳಲು ಅದು ಮಲಗಿರಲಿಲ್ಲ. ನಿದ್ದೆ–ಎಚ್ಚರದ ಸ್ಥಿತಿ ಅದಕ್ಕಿರಲಿಲ್ಲ. ಆದರೆ ಹೊರಗಿನ ಬೆಳಕು–ಬೆಳಗು ಅದಕ್ಕೆ ಸುಶುಪ್ತಾವಸ್ಥೆಯನ್ನು ಕೊಡುತ್ತಿದ್ದಂತೆಯೇ ಪ್ರತೀ ಇರುಳೂ–ಇರುಳಿನ ಕತ್ತಲೂ ಅದನ್ನು ಸುಶುಪ್ತಾವಸ್ಥೆಯಿಂದ ಹೊರತರುತ್ತಿತ್ತು. ಆಲೋಚನಾ ಶಕ್ತಿಯಿಲ್ಲದ ಅದರಲ್ಲಿ ತುಂಬಿದ್ದುದು ಬರೀ ರೂಕ್ಷಭಾವ, ಇಂದ್ರಿಯಾದಿ ಜ್ಞಾನದಿಂದ ಕೂಡಿದ ಪ್ರತಿಯೊಂದನ್ನೂ ತನ್ನೊಳಕ್ಕೆ, ತನ್ನ ತೆಕ್ಕೆಯೊಳಕ್ಕೆ ಎಳೆದುಕೊಳ್ಳಬೇಕೆಂಬ ಭಾವ! ಉರಿಯುತ್ತಿರುವ ಬೆಂಕಿಯ ಜ್ವಾಲೆ, ತನ್ನೊಡಲಿಗೆ ಹಾಕಿದ ಎಲ್ಲವನ್ನೂ ಒಂದು ಮಾಡಿ ಉರಿಯುವಂತೆ. ಹನಿ–ಹನಿಯೂ ಸೇರಿ, ಮತ್ತೆ ಅವೇ ಹನಿ–ಹನಿಯಾಗಿ ಪ್ರತ್ಯೇಕಿಸಲಾಗದ ಜಲಧರೆಯಾಗುವಂತೆ, ಎಲ್ಲವನ್ನೂ ತನ್ನೊಳಗೆ ಒಂದು ಮಾಡಿಕೊಳ್ಳಬೇಕೆನ್ನುವ ಭಾವ ಮಾತ್ರ ಅದಕ್ಕಿತ್ತು!

ಅದಕ್ಕೆ ಕಣ್ಣುಗಳಿಲ್ಲ, ಆದರೂ ಅದು ಎಲ್ಲವನ್ನೂ ನೋಡುತ್ತದೆ, ಕಿವಿಗಳಿಲ್ಲ ಆದರೂ ಎಲ್ಲವನ್ನೂ ಗ್ರಹಿಸುತ್ತದೆ, ಯಾವ ಅಂಗಾಂಗಳೂ ಇಲ್ಲ, ಚಲನೆಯಿದೆ, ಆದರೂ ಅದಕ್ಕೆ ಈ ಕಟ್ಟಡವನ್ನು ಬಿಟ್ಟು ಹೋರ ಹೋಗಿ ಗೊತ್ತಿಲ್ಲ. ಯಾವುದೋ ಅಮುಖ್ಯವಾದ ಇತಿಹಾಸದಾಳದ ಒಂದು ಅಗೋಚರ ಹೊಕ್ಕುಳ ಬಳ್ಳಿ ಅದನ್ನು ಇಲ್ಲಿಯೇ ಕಟ್ಟಿ ಹಾಕಿದೆ. ಹಸಿವು–ನೀರಡಿಕೆ–ನಿದ್ದೆ–ತೂಕಡಿಕೆಯಂತಹ ಶರೀರ ಸಂಬಂಧಿ ಕ್ರಿಯೆಗಳು ಅದನ್ನು ಬಾಧಿಸಲಾರವು, ಯಾಕೆಂದರೆ ಅದಕ್ಕೆ ಶರೀರವಿಲ್ಲ!

ಕಾಯುವಿಕೆಯಿಲ್ಲ, ತಪನೆಯಿಲ್ಲ, ಕೊನೆ–ಮೊದಲ ಅರಿವಿಲ್ಲದ ಆ ಇರುವಿಕೆಗೆ ಭೌತಿಕ ಜಗತ್ತಿನಲ್ಲಿ ಅಪ್ಪಟ ಪವಾಡವೆನಿಸುವ ಕೆಲವೊಂದು ಕ್ರಿಯೆಗಳು ಗೊತ್ತಿದ್ದವು. ಭೌತಿಕ ಜಗತ್ತು ನಿಂತಿರುವುದೇ ತರ್ಕದ/ಕಾರಣದ ಆಧಾರದ ಮೇಲೆ. ಆ ಇರುವಿಕೆಯ ಕ್ರಿಯೆಗಳು ಯಾವ ತರ್ಕಕ್ಕೂ ಸಿಕ್ಕುತ್ತಿರಲಿಲ್ಲವಾದುದರಿಂದ ಸಂವೇದಿಯಾಗದ ಭೌತ ಜಗತ್ತಿನ ಜೀವಿಗಳ ತರ್ಕಕ್ಕೆ ಅದೂ ಸುಲಭವಾಗಿ ಸಿಕ್ಕುತ್ತಿರಲಿಲ್ಲ.

ಹೀಗೆ ಸಂಜೆಗತ್ತಲು ದಟ್ಟೈಸುತ್ತಿದ್ದಂತೆ ತನ್ನ ಸುಶುಪ್ತಿಯಿಂದ ಹೊರಬರುತ್ತಿದ್ದ ಆ ಇರುವಿಕೆಗೆ ತನ್ನ ಪರಿಧಿಯಾದ 'ಪ್ರೊಜೆಕ್ಟರ್ ರೂಮ್'ನ ಹೊರಗೆ, ಬಾಲ್ಕನಿಯ ಮೆಟ್ಟಿಲುಗಳ ಕೆಳಗೆ ನಡೆಯುತ್ತಿದ್ದ ಮಾತುಗಳು ಗ್ರಹಿಕೆಗೆ ಬಂದವು!

"ನಾನಂತೂ ನೋಡ್ಕೊಂಡ್ ಬರ್ತೀನಿ, ನಮ್ಮ ಗುಂಪಲ್ಲಿ ನೀವಿಬ್ಬರೇನಾ ಧೈರ್ಯಶಾಲಿಗಳು?"

"ಬೇಡಾ ಹ್ಯಾರಿ!"

"ಬಿಡೋ! ನನ್ನ ಶರ್ಟ್ ಹಿಡೀ ಬೇಡ!"

"ಪ್ಲೀಸ್ ಹ್ಯಾರಿ, ನನ್ಮಾತು ಕೇಳು!"

ಆ ಇರುವಿಕೆ ಮೆಲ್ಲನೆ ತೇಲಿಕೊಂಡು 'ಪ್ರೊಜೆಕ್ಟರ್ ರೂಮ್'ನ ಬಾಗಿಲಿನಿಂದ ಹೊರಬಂತು! ಮೆಟ್ಟಿಲುಗಳ ಎರಡು ಸರಣಿಗಳಾಚೆಗೆ, ಕೆಳಗೆ ಆ ಎಂಟು ಜನ ಹುಡುಗರು ನಿಂತು ಮಾತನಾಡುತ್ತಿದ್ದರು.

"ಹ್ಯಾರಿ... have you ever seen Arun this much freaked out? Let it go man! There's no setup in this! "

"ಆದ್ರೂ ನಾನು ಇದೆಲ್ಲಾ ಏನು ಅಂತಾ ನೋಡ್ಲೇ ಬೇಕು!"

ತನ್ನ ಚಲನೆಗೆ ಮೆಟ್ಟಿಲುಗಳ ಅವಶ್ಯಕತೆಯಿಲ್ಲದಿದ್ದರೂ ಆ ಇರುವಿಕೆ ಮೆಲ್ಲನೆ 'ಪ್ರೊಜೆಕ್ಟರ್ ರೂಮ್'ನ ಒಂದೊಂದೇ ಮೆಟ್ಟಿಲುಗಳನ್ನು ತೇಲುತ್ತ ಇಳಿಯಲಾರಂಭಿಸಿತು. ಮೊದಲೇ ಹೇಳಿದ ಅಗೋಚರ ತಂತುವಿನಿಂದಾಗಿ 'ಪ್ರೊಜೆಕ್ಟರ್ ರೂಮ್'ನಿಂದ ಹೊರಗಡೆ ಅದರ ಚಲನೆ ಎಳೆದೆಳೆದಂತೆ ನಿಧಾನವಾಗುತ್ತಿತ್ತು.

"ಇಲ್ಲ. ನಾನು ನಿನ್ನನ್ನು ಮೇಲೆ ಹೋಗೋಕೆ ಬಿಡೋಲ್ಲ. ನಿನ್ನೆ ನಾನು ಏನು ನೋಡಿ ಹೆದರಿದೆ ಅಂತಾ ನನಗೆ ಇನ್ನೂ ಗೊತ್ತಿಲ್ಲ, ಆದ್ರೆ ಅದನ್ನು ನೋಡಿದ ಕೂಡಲೇ ನನಗೆ ಅನಿಸಿದ್ದು ಇನ್ನೂ ನೆನಪಿದೆ... 'I felt, that I am going to be a logical example for all the horror stories, ghost stories my generation would narrate!'"

ತನ್ನನ್ನು ಎಳೆಯುತ್ತಿರುವ 'ಪ್ರೊಜೆಕ್ಟರ್ ರೂಮ್'ನ ಬಂಧದ ಸೆಳೆತ ಜಾಸ್ತಿಯಾದಂತಾಗಿ ಬಾಲ್ಕನಿಯ ದ್ವಾರದ ತನಕ ಬಂದ ಆ ಇರುವಿಕೆ ಅಲ್ಲೇ ಸ್ವಲ್ಪಹೊತ್ತು ನಿಂತಿತು. ಕೆಳಗಡೆ ಹುಡುಗರು ಮೌನವಾದರು.

"ಹ್ಮ್... ಸರಿ, ಬಿಡು!" ಮೊದಲನೇ ಮೆಟ್ಟಿಲ ಮೇಲೆ ಕಾಲು ಇಟ್ಟಿದ್ದ ಹ್ಯಾರಿ, ಬಾಲ್ಕನಿಗೆ ಹೋಗುವ ಮೆಟ್ಟಿಲು ಬಿಟ್ಟು ಮೆಲ್ಲನೆ ಕೆಳಗಿಳಿದ.

"ಯಾವಾಗ್ಲೂ ಎಲ್ಲದಕ್ಕೂ ತರ್ಕಬದ್ಧವಾದ ಕೊನೆಯಿರಬೇಕು ಅಂತಾ ಯಾಕೆ ಅಂದ್ಕೋಬೇಕು. ನಮ್ಮಪ್ಪನಾಣೆ, ಇದೆಲ್ಲ ನಾಟಕವಲ್ಲ. ಅರುಣ ಹೆದರಿದಾನೆ, ಹಾಗಾಗಿ ಈ ವಿಷಯದಲ್ಲಿ ಮುಂದುವರೆಯೋದು ಬೇಡ. ಅಂತ್ಯ ಗೊತ್ತಿಲ್ಲದೇ ಇರೋ ವಿಷಯಗಳೂ ಕೆಲವೊಮ್ಮೆ ತುಂಬಾ thrill ಕೊಡುತ್ವೆ!"

ಹುಡುಗರು ಹೊರಹೋಗಲು ಮೆಲ್ಲನೆ ಹಿಂತಿರುಗಿದರು. ಬಾಲ್ಕನಿಯ ದ್ವಾರದಲ್ಲಿದ್ದ ಆ ಇರುವಿಕೆ ಲಗುಬಗೆಯಿಂದ ಮೆಟ್ಟಿಲುಗಳನ್ನು ಇಳಿಯಲಾರಂಭಿಸಿತು. ಅವರನ್ನೆಲ್ಲ ಒಟ್ಟಿಗೇ ತನ್ನೊಳಕ್ಕೆ ಸೇರಿಸಿಕೊಳ್ಳಲು ಸಾಧ್ಯವೇ? ಎಂದೆಲ್ಲ ಯೋಚಿಸದೇ ತನ್ನದೇ ಹಿಂದಿನ ಕಾರ್ಯಯೋಜನೆಯ ಕುರುಹಾದ ಗೀರುಗೀರಾದ ಗೋಡೆಯ ನೋಡುತ್ತ(!) ಜಾರಿದಂತೆ ರಭಸವಾಗಿ ಇಳಿಯಲಾರಂಭಿಸಿದ ಅದು ಕೊನೆಯ ಕೆಳ ಮೆಟ್ಟಿಲನ್ನು ತಲುಪಿದ ಕೂಡಲೇ ಅದನ್ನು ಬಂಧಿಸಿದ್ದ ಬಂಧದ ಸೆಳೆತ ಮೇರೆ ಮೀರಿ, ಎಳೆದು ಬಿಟ್ಟ ರಬ್ಬರಿನಂತೆ ಅದು ಸೀದಾ ಮತ್ತೆ 'ಪ್ರೊಜೆಕ್ಟರ್ ರೂಮ್' ಸೇರಿಕೊಂಡಿತು! ಮತ್ತು 'ಪ್ರೊಜೆಕ್ಟರ್ ರೂಮ್'ನ ಚಚ್ಚೌಕದ ಕಿಂಡಿಗಳಲ್ಲಿ ಆ ಹುಡುಗರೇನಾದರೂ ಮತ್ತೆ ಸಿನೆಮಾ ಹಾಲ್‌ನೊಳಕ್ಕೆ ಬಂದು ನೋಡುತ್ತಾರೇನೋ, ಆಗ ತಾನು ಈ ಕಿಂಡಿಗಳಲ್ಲಿ ಬೆಳಕಿನದೊಂದು ಪವಾಡ-ಕ್ರಿಯೆ ನಡೆಸಿ ಮತ್ತೆ ಅವರ ಕುತೂಹಲ ಕೆರಳಿಸಿ, ಬಾಲ್ಕನಿಯ ಮೆಟ್ಟಿಲುಗಳನ್ನು ಹತ್ತುವಂತೆ ಮಾಡಬಲ್ಲೆನೇನೋ ಎಂದು ನೋಡುತ್ತಲೇ ಇತ್ತು! ಕತ್ತಲಾಯಿತು!

------------

ಹುಡುಗರು ಟಾಕೀಸ್‌ನೊಳಗೆ ಮತ್ತೆಲ್ಲೂ ಅಲೆಯ ಹೋಗದೇ ಸೀದಾ ಅದರ ಹೊರ ಪ್ರಾಂಗಣಕ್ಕೆ ಬಂದು ಮೆಟ್ಟಿಲುಗಳನ್ನಿಳಿದು, ಮುಂದಿನ ಬಯಲನ್ನು ಹಾದು ಹೆಚ್ಚು ಮಾತಿಲ್ಲದೇ ಕಾಂಪೌಂಡ್ ದಾಟಿದರು. ಸಂಜೆ ರಾತ್ರಿಯಾಗಿ, ಕತ್ತಲು ಆವರಿಸಿ, ಬೇಲೂರಿನ ಬಸ್‌ನಿಲ್ದಾಣದ ಸುತ್ತ ಮುತ್ತಲ ದೀಪಗಳು ಹೊತ್ತಿಕೊಂಡವು. ಎಲ್ಲರೂ ಗುಂಪಾಗಿ ಹೋಗಿ, 'ಹೋಟೆಲ್ ಶಾಂತಲಾ' ಹೊಕ್ಕು ಹೆಚ್ಚು ಮಾತಿಲ್ಲದೇ ಕಾಫಿ ಆರ್ಡರ್ ಮಾಡಿದರು, ನಂತರ ಒಬ್ಬೊಬ್ಬರಾಗಿ ಕೈ ತೊಳೆದುಕೊಳ್ಳಲು ನೀರಿನ ಸಿಂಕ್ ಹತ್ತಿರ ನಡೆದರು.

ನಿಟ್ಟುಸಿರು ಬಿಟ್ಟು ಸಿಂಕ್‌ನೆದುರು ನಿಂತು ತನ್ನ ಮುಖ ನೋಡಿಕೊಂಡ ಹ್ಯಾರಿ, ದೃಷ್ಟಿ ಕೆಳಗಿಳಿಸಿ ತನ್ನ ಕೈಗಳನ್ನು ನೋಡಿಕೊಂಡ, ಅಲ್ಲಿ ಗೋಡೆಯ ಗೀರುಗಳನ್ನು ಮುಟ್ಟಿದ ಅವನ ಬಲಗೈಯ ಮೂರು ಬೆರಳುಗಳ ತುದಿಯಲ್ಲಿ-ಆಗ ಇಲ್ಲದ ಅದೇ ಕಡುಗೆಂಪು ಬಣ್ಣದ ದ್ರವ ಅಂಟಿಕೊಂಡಿತ್ತು!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್. ks_shivu@yahoo.com**